ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-6 Issue-5, March- April 2025, Pp. 68-72**
**©*IIMRD*, Mysuru**

**www.iimrd.com**

# ಹೈದರಾಬಾದ್ ಕರ್ನಾಟಕ ಪ್ರದೇಶದ ಕಾರ್ಮಿಕರ ಚಾರಿತ್ರಿಕ ನೋಟ

**ದಸ್ತಪ್ಪ[1] ಮತ್ತು ಡಾ. ಸತೀಶ್‌ಕುಮಾರ್ ಶೆಟ್ಟಿ[2]**
[1]ಸಂಶೋಧನಾ ವಿದ್ಯಾರ್ಥಿ, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
[2]ಮಾರ್ಗದರ್ಶಕರು ಹಾಗೂ ನಿವೃತ್ತ ಪಾಂಶುಪಾಲರು, ಬೆಸೆಂಟ್ ಮಹಿಳಾ ಕಾಲೇಜು, ಮಂಗಳೂರು

**ಸಾರಾಂಶ: (Abstract)**

*ಅಭಿವೃದ್ಧಿ ಪದವು ಮನುಷ್ಯ ಕುಲದ ಸಾಧನೆ ಮತ್ತು ಸವಾಲುಗಳು ಎಂಬ ವಿಷಾಯಾಧಾರಿತವಾಗಿಯೇ ಮೈವೆತ್ತಿರುತ್ತದೆ. ಒಂದು ದೇಶ ರಾಜ್ಯಗಳನ್ನು ಮುನ್ನಡೆಸುವಲ್ಲಿ ಕೈಗಾರಿಕೆಗಳು ಮಹತ್ವದ ಪಾತ್ರ ವಹಿಸುತ್ತವೆ. ಕೈಗಾರಿಕೆಗಳನ್ನ ಬಲಗೊಳಿಸಲು ಮಾನವ ಸಂಪನ್ಮೂಲ ತುಂಬ ಅವಶ್ಯಕವಾಗಿರುತ್ತದೆ, ಅಲ್ಲದೆ ಕೈಗಾರಿಕೆಗಳು ಕಂಪನಿಗಳಾಗಿ ಕಾರ್ಖಾನೆಗಳಾಗಿ ರೂಪ ತಾಳಿರುತ್ತವೆ. ಅದರಲ್ಲಿ ಐಟಿ ಬಿಟಿಯು ಇಂದಿನ ಸ್ವರೂಪದ ಕಂಪನಿಗಳಾಗಿ ಗುರುತಿಸಿಕೊಂಡು ಬೌದ್ಧಿಕ ವಲಯದಿಂದ ಹೆಚ್ಚು ಮುನ್ನೆಲೆಗೆ ಬಂದರೆ ಅದರ ಇನ್ನೊಂದು ಭಾಗವಾದ ಕಾರ್ಖಾನೆಗಳು ದೈಹಿಕ ಶ್ರಮನಿರತ ಜನಗಳಿಂದ ರಚನೆಗೊಂಡಿರುತ್ತದೆ. ಈ ತರಹದ ವ್ಯವಸ್ಥೆಯು ಅವರನ್ನು ಕಾರ್ಮಿಕರು ಎಂಬ ಹೆಸರಿನಿಂದ ಗುರುತಿಸಲ್ಪಡುತ್ತದೆ. ಇಂತಹ ಕಾರ್ಮಿಕರು ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ದುಡಿಯುವಂತಹ ಕಾರ್ಮಿಕರ ಚಾರಿತ್ರಿಕ ಹಿನ್ನಲೆಯ ನೋಟದ ಆಧಾರದಲ್ಲಿ ಕೈಗಾರಿಕೆಗಳು ಯಾವ ರೀತಿಯಾಗಿ ಅವರನ್ನ ಬಳಸಿಕೊಂಡು ಬಂದಿವೆ, ಅವರ ಜೀವನ ಸ್ಥಿತಿ, ವೃತ್ತಿಬದುಕು, ಸಮಾಜದಲ್ಲಿನ ಅವರ ಸ್ಥಾನಮಾನ ಬದಲಾದ ಸಂದರ್ಭದಲ್ಲಿ ಕಾರ್ಮಿಕರು ಎದುರಿಸಿ ಬಂದಿರುವ ಸವಾಲು ಮತ್ತು ಅದನ್ನು ಮೀರಿ ನಿಲ್ಲುವ ಸಾಧ್ಯತೆಗಳು ಮುಂತಾದ ವಿಷಯಾಂಶ ಆಧಾರಿತ ವಿಚಾರಗಳನ್ನು ಪ್ರಸ್ತುತ ಲೇಖನವನ್ನು ಸಿದ್ಧಪಡಿಸಲಾಗಿದೆ.*

**ಮುಖ್ಯಪದಗಳು (Keywords):** ಹೈದರಾಬಾದ್ ಕರ್ನಾಟಕ, ಕಾರ್ಮಿಕರು, ಚಾರಿತ್ರಿಕ ಹಿನ್ನೆಲೆ, ಕೈಗಾರಿಕೆಗಳು.

## ಪೀಠಿಕೆ

ಮಾನಸಿಕ ಮತ್ತು ದೈಹಿಕ ಶ್ರಮವನ್ನು ವ್ಯಹಿಸಿ ಹಣಕಾಸಿನ ಪ್ರತಿಫಲದ ಮೇಲೆ ಕೆಲಸ ನಿರ್ವಹಿಸುವವರನ್ನು ಕಾರ್ಮಿಕರೆಂದು ಕರೆಯುವರು. ಪ್ರೊ.ಮಾರ್ಷಲ್ ಅವರ ಪ್ರಕಾರ ಯಾವುದೇ ವ್ಯಕ್ತಿಯು ಮಾನಸಿಕ ಅಥವಾ ದೈಹಿಕ ಶ್ರಮವನ್ನು ಪೂರ್ಣವಾಗಿ ಅಥವಾ ಆಪರಿಪೂರ್ಣವಾಗಿ ವ್ಯಹಿಸಿ ಗಳಿಕೆಯನ್ನು ಪಡೆದುಕೊಳ್ಳುವ ವರ್ಗವನ್ನು ಕಾರ್ಮಿಕರು ಎಂದು ಕರೆದಿದ್ದಾರೆ.[1] ಇನ್ನೊಂದು ಪ್ರಕಾರ ಕಾರ್ಮಿಕರು

*Please cite this article as:* ದಸ್ತಪ್ಪ ಮತ್ತು ಸತೀಶ್‌ಕುಮಾರ್ ಶೆಟ್ಟಿ. (2025). ಹೈದರಾಬಾದ್ ಕರ್ನಾಟಕ ಪ್ರದೇಶದ ಕಾರ್ಮಿಕರ ಚಾರಿತ್ರಿಕ ನೋಟ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 6(5). ಪು.ಸಂ.* 68–72

ಎಂದರೆ ಬೇರೆಯವರಿಗೋಸ್ಕರ ಶಾರೀರಿಕವಾಗಿ ಹಾಗೂ ಮಾನಸಿಕವಾಗಿ ಶ್ರಮದ ಕೆಲಸವನ್ನು ಮಾಡಿ ಅವರು ಕೊಡುವ ಕೂಲಿಯಿಂದ ತನ್ನ ಹೊಟ್ಟೆ ತುಂಬಿಸಿಕೊಳ್ಳುವುದು ಎಂದರ್ಥ.[2]

**ಕೈಗಾರಿಕೆ ಮತ್ತು ಕಾರ್ಮಿಕರ ಸ್ವರೂಪ**

ಶ್ರಮ ವಿಭಜನೆಯು ಮಾನವನನ್ನು ಎರಡು ರೀತಿಯಲ್ಲಿ ಗುರುತಿಸುತ್ತದೆ. ಕಾರ್ಮಿಕರು ತಾಂತ್ರಿಕ ಸಾಧನಗಳನ್ನು ಬಳಸಿ ಮಾಡುವ ಆರ್ಥಿಕ ಶ್ರಮಪೂರಕ ದುಡಿಮೆ. ಇನ್ನೊಂದು ಮನುಷ್ಯ ತನ್ನ ಸಮಾಜದಲ್ಲಿ ಏಣಿ ಶ್ರೇಣಿ ಸ್ಥಾನಮಾನ ಪಡೆಯುವ ಆಧಾರದ ಮೇಲೆ ಪಡೆಯುವ ಸಾಮಾಜಿಕ ಗುರುತಿಸುವಿಕೆ ಒಳಗೊಂಡಿರುತ್ತದೆ. ಕರ್ನಾಟಕದಲ್ಲಿ ಕಾರ್ಮಿಕರು ಒಗ್ಗೂಡುವ ಮತ್ತು ಚಳುವಳಿ ಶುರುವಾಗುವ ಮೊದಲೆ ದೇಶದ ಕೆಲವು ಭಾಗಗಳಲ್ಲಿ ಅಷ್ಟು ಹೊತ್ತಿಗಾಗಲೇ ಕಾರ್ಮಿಕ ಚಳುವಳಿ ಒಂದಷ್ಟು ಪ್ರಗತಿ ಸಾಧಿಸಿದ್ದರು, 1920ರ ವರೆಗೆ ಕರ್ನಾಟಕದಲ್ಲಿ ಅದರ ಸೊಲ್ಲು ಕೂಡ ಕೇಳಿ ಬರಲಿಲ್ಲ. ಭಾರತದ ಮಟ್ಟಿಗೆ ವಸಾಹತು ಭಾರತದ ಅರ್ಥವ್ಯವಸ್ಥೆ ಕೈಗಾರಿಕೆಯ ಬೆಳವಣಿಗೆಗೆ ಆಸ್ಪದ ನೀಡಿತು. 19ನೆಯ ಶತಮಾನದ ಮಧ್ಯಭಾಗದ ವೇಳೆಗೆ ಮುಖ್ಯವಾಗಿ ತೋಟದ ಉದ್ಯಮ ಹಾಗೂ ಅಗೆದು ತೆಗೆಯುವ (ಗಣಿಗಳಂತಹ) ಉದ್ಯಮಗಳಿಗೆ ಪ್ರೋತ್ಸಾಹ ದೊರಕಿತು. ಪಶ್ಚಿಮ ಭಾರತದ ಮುಂಬೈ ಅಹಮದಾಬಾದ್‌ಗಳಲ್ಲಿ ಕೆಲವು ಬಂಡವಾಳಗಾರರು ಬಹಳ ಪರಿಶ್ರಮದಿಂದ ಭಾರತದತ್ತ ಮೊಟ್ಟ ಮೊದಲನೆಯ ಟೆಕ್ಸ್‌ಟೈಲ್ (ಹತ್ತಿ) ಕಾರ್ಖಾನೆಗಳನ್ನು ಸ್ಥಾಪಿಸಿದರು. ಮುಖ್ಯವಾಗಿ 20ನೇ ಶತಮಾನವು ಕಾಲಿಡುವ ಹೊತ್ತಿಗೆ ಕೆಲವು ಬಿಡಿ ಪ್ರದೇಶಗಳು ತಕ್ಕಮಟ್ಟಿಗೆ ಚೆನ್ನಾಗಿ ಅಭಿವೃದ್ಧಿ ಹೊಂದಿದವು, ಅಸ್ಸಾಮಿನ ಪ್ಲಾಂಟೇಷನ್‌ಗಳು ಬಂಗಾಳದ ಸೆಣಬು ಗಿರಣಿಗಳು ಬಂಗಾಳದ ಕಲ್ಲಿದ್ದಲು ಗಣಿಗಳು ಅಹ್ಮದಾಬಾದ್ ಮತ್ತು ಮುಂಬೈಯ ಬಟ್ಟೆ ಗಿರಣಿಗಳು ಗಣನೀಯವಾಗಿ ಬೆಳೆದವು. ಆದರೆ ಮೈಸೂರಿನಂತ ಸಂಸ್ಥಾನಗಳಲ್ಲಿ ಅದು ಇನ್ನು ನಿರುತ್ಸಾಹವಾಗಿತ್ತು.[3]

ಮೈಸೂರು ಸಂಸ್ಥಾನದಲ್ಲಿ ಮೂರು ಸ್ಥಳಗಳಿಗೆ ಕೈಗಾರಿಕೆಗಳು ಸೀಮಿತವಾಗಿದ್ದವು, ಪಶ್ಚಿಮ ಮೈಸೂರಿನ ಕಾಫಿ ಮತ್ತು ಅಡಿಕೆ ತೋಟಗಳು ಕೋಲಾರದ ಚಿನ್ನದ ಗಣಿಗಳು ಹಾಗೂ ಬೆಂಗಳೂರಿನ ವಿವಿಧ ಮಿಲ್ಲುಗಳು ಗಿರಣಿಗಳು ಕಾರ್ಖಾನೆಗಳು ಇವುಗಳಲ್ಲಿ ತೋಟದ ಉದ್ಯಮ ಬೃಹತ್ ಸಂಖ್ಯೆಯಲ್ಲಿ ಗಂಡಸು ಹೆಂಗಸರನ್ನು ನೇಮಿಸಿಕೊಳ್ಳುತ್ತಿದ್ದದ್ದು.[4] ಇದು ಅಂದಿನ ಸ್ಥಿತಿಯಾಗಿದ್ದವು.

**ಹೈದರಾಬಾದ್ ಕರ್ನಾಟಕ ಮತ್ತು ಕಾರ್ಮಿಕರ ಚಾರಿತ್ರಿಕ ಹಿನ್ನೆಲೆ**

ಕರ್ನಾಟಕವು ರಾಜ್ಯ ಪುನರ್‌ವಿಂಗಡಣೆಯಾದಾಗ ಬೀದರ್, ಗುಲ್ಬರ್ಗ, ರಾಯಚೂರು ಮತ್ತು ಬಳ್ಳಾರಿ (ಜಿಲ್ಲೆಗಳು ಇದರ ವ್ಯಾಪ್ತಿಗೆ ಒಳಪಟ್ಟಿದ್ದವು) ಈ ಭಾಗದಲ್ಲಿ ಪ್ರಾಚೀನ ಕಾಲದಲ್ಲಾಗಲಿ, ಮಧ್ಯಯುಗದಲ್ಲಾಗಲಿ ದೊಡ್ಡ ಪ್ರಮಾಣದಲ್ಲಿ ಕೈಗಾರಿಕೆಗಳಿರಲಿಲ್ಲ, ಗುಲ್ಬರ್ಗ ನಗರದಲ್ಲಿ ಒಂದು ದೊಡ್ಡ ಪ್ರಮಾಣದಲ್ಲಿ ಬಟ್ಟೆಯ ಕಾರ್ಖಾನೆ ಅಸ್ತಿತ್ವಕ್ಕೆ ಬಂದಿದ್ದು. 1883 ರಲ್ಲಿ ಅಷ್ಟೇ ಗೃಹಕೈಗಾರಿಕೆ ಮಾದರಿಯ ದೇಶಿಯ ಉದ್ಯಮಗಳು ರಾಷ್ಟ್ರಕೂಟರ ಕಾಲದಲ್ಲೂ ಇಲ್ಲಿ ಚೆನ್ನಾಗಿ ಬೆಳೆದಿದ್ದವು. ಅವುಗಳ ಹೇಳಿಕೆಯು ಸ್ಥಳೀಯ ಜನರ ಅಗತ್ಯ ವಸ್ತುಗಳನ್ನು ಅವಲಂಬಿಸಿದ್ದಿತು. ಅನೇಕರಿಗೆ ಉದ್ಯೋಗವನ್ನು ದೊರಕಿಸುತ್ತಿದ್ದ ಮುಖ್ಯ ಗೃಹ ಉದ್ಯಮ ಬಟ್ಟೆ ನೇಯುವುದು ವಿಜಯನಗರ ಮತ್ತು ಬಹುಮನಿ ರಾಜ್ಯಗಳ ಸ್ಥಾಪನೆಯಾದ ಮೇಲೆ ಕೈಗಾರಿಕೆ ಸಂಬಂಧಿಸಿದ ಪರಿಸ್ಥಿತಿಗಳನ್ನು ಕುರಿತು ಮಾಹಿತಿಯು ಹೆಚ್ಚು ವಿಫಲವೂ ಕಷ್ಟವೂ ಆಯಿತು. ಈ ರಾಜ್ಯಗಳಿಗೆ ಭೇಟಿ ನೀಡಿದ

ವಿದೇಶಿಯರು ಅದನ್ನು ದಾಖಲಿಸಿದ್ದಾರೆ. 1908ರಲ್ಲಿ ಪ್ರಕಟವಾದ 'ಇಂಪೀರಿಯಲ್ ಗೆಜಿಟಿಯರ್ ಆಫ್ ಇಂಡಿಯಾ' ದಲ್ಲಿ ಪ್ರಾಚೀನ ಕೈಗಾರಿಕೆಗಳ ವಿಷಯದಲ್ಲಿ ಹೀಗೆ ಬೆಳಕು ಚೆಲ್ಲುತ್ತದೆ.

ಜಿಲ್ಲೆಯಲ್ಲಿ ಹೇರಳವಾಗಿ ದೊರಕುವ ಅತ್ಯಂತ ಮುಖ್ಯವಾದ ಖನಿಜವೆಂದರೆ ಹೊಳಪಿನ ಸುಣ್ಣದ ಕಲ್ಲು ಈಗಲೂ ಗುಲ್ಬರ್ಗ ಭಾಗದಲ್ಲಿ ಅದರ ಕೈಗಾರಿಕೆಗೆ ಕಾರ್ಖಾನೆಗಳಿರುವುದು ಕಂಡುಬರುತ್ತದೆ. ಇದು ಗ್ರೇಟ್ ಇಂಡಿಯನ್ ಪೆನಿನ್ಸುಲಾರ್ ರೈಲ್ವೆ ಹಾದಿಯ ಶಾಹಾಬಾದಿನಲ್ಲಿ ನಿಜಾಮನ ಗ್ಯಾರಂಟೀಡ್ ಸ್ಟೇಟ್ ರೈಲ್ವೆ ಹಾದಿಯಲ್ಲಿರುವ ಚಿತ್ತಾಪುರದಲ್ಲಿ ಗುಲ್ಬರ್ಗ ಮತ್ತು ಸೇಡಂ ತಾಲೂಕುಗಳಲ್ಲಿ ಕಂಡುಬರುತ್ತದೆ. ಅಲ್ಲಿ ಈ ಕಲ್ಲಿನ ಕೆಲಸ ವ್ಯಾಪಕವಾಗಿ ನಡೆಯುತ್ತದೆ.  ಈ ಕಲ್ಲನ್ನು ಶಹಬಾದ್ ಕಲ್ಲು ಎಂದು ಕರೆಯುತ್ತಾರೆ. ಮೊದಲು ಅದನ್ನು ಅಗೆದ ಸ್ಥಳದ ಹೆಸರಿನ ಮೇಲೆ ಈ ಕಲ್ಲನ್ನು ಬಹಳವಾಗಿ ಚಾವಣಿ ಮತ್ತು ನೆಲಗಳಿಗೆ ಬಳಸಲಾಗುತ್ತದೆ.[5]

ಕಾರ್ಮಿಕರ ಹಿನ್ನೆಲೆ ಅವಲೋಕಿಸಿದರೆ ಯಾವುದೇ ಒಂದು ಚಳುವಳಿ ರೂಪುಗೊಳ್ಳುವುದಕ್ಕೆ ಕಾರ್ಮಿಕರ, ಕೂಲಿಕಾರರ ವಿಚಾರಗಳು ಮುಖ್ಯವಾಗಿರುತ್ತವೆ. ಕೇವಲ ಧಾರ್ಮಿಕ ಅಥವಾ ಸಾಂಪ್ರದಾಯಿಕಗಳ ಜಡತ್ವ ಮಾತ್ರ ಕಾರಣವಾಗಿರುವುದಿಲ್ಲ. ಬದುಕಿನ ಸಂಗತಿಗಳಾದ ಅರ್ಥ ವ್ಯವಸ್ಥೆಯು ಸಮಾಜದ ಹಿನ್ನೆಲೆಯನ್ನು ಅವಲಂಬಿಸಿ ಅವು ರೂಪುಗೊಂಡಿರುತ್ತವೆ. ಯಾವುದೇ ಕಾರ್ಮಿಕರ ಜೀವನ ಮತ್ತು ಹಕ್ಕು ಪಡೆಯುವ ನಿರ್ಧಾರಗಳು ಅವು ಸಮಾಜ ಆರ್ಥಿಕ ಹಾಗೂ ರಾಜಕೀಯ ಕಾರಣಗಳಿಂದಲೂ ಪ್ರೇರಿತವಾಗಿರುವುದನ್ನು ತಳ್ಳಿ ಹಾಕುವಂತಿಲ್ಲ.  ಕಾರ್ಮಿಕರು ಇಂಥದ್ದೇ ಜಾತಿ, ಧರ್ಮ, ಮತ, ಪಂಥ ಸಮುದಾಯವನ್ನೇ ಅವಲಂಬಿಸಿರುವುದಿಲ್ಲ, ಇಲ್ಲಿ ಶೋಷಣೆಯಿಂದ ತಮ್ಮ ತಮ್ಮ ಬದುಕಿನ ಆಸಕ್ತಿಗಳನ್ನು ರಕ್ಷಿಸಿ ಕೊಳ್ಳುವುದರ ಮೂಲಕ ವರ್ಗ ರೂಪ ಪಡೆದು ಕಾರ್ಮಿಕರು ಸಂಘಟಿತರಾಗುವುದು ಕಂಡುಬರುತ್ತದೆ.[6] ಕರ್ನಾಟಕದಲ್ಲಿ ಮುಖ್ಯವಾಗಿ ಕಾರ್ಮಿಕರ ಸಂಘಗಳನ್ನು ಎರಡು ವಿಶ್ವ ಸಮರಗಳ ನಡುವಿನ ಸಮಯದಲ್ಲಿ ತಮ್ಮ ಕಾರ್ಮಿಕ ಸದಸ್ಯರುಗಳ ಆರ್ಥಿಕ ಸ್ಥಿತಿಗತಿಗಳನ್ನು ಉತ್ಪಾದಿಸುವ ಸಲುವಾಗಿ ಹಾಗೂ ತಮ್ಮ ಸಂಘಟನೆಗಳಿಗೆ ಕಾನೂನಿನ ಮಾನ್ಯತೆಯನ್ನು ಪಡೆದುಕೊಳ್ಳುವುದಕ್ಕಾಗಿ ಚಳುವಳಿ ರೂಪದಲ್ಲಿ ಹುಟ್ಟು ಹಾಕಲಾಯಿತು. ಇದುವರೆಗೆ ಕಾರ್ಮಿಕರ ಕಲ್ಯಾಣಕ್ಕಾಗಿ ಸುಮಾರು 125 ಕಾನೂನುಗಳನ್ನು ಜಾರಿಗೊಳಿಸಿದ್ದು ಅವು ಎಲ್ಲ ರಾಜ್ಯಗಳಿಗೂ ಅನ್ವಯಿಸುತ್ತದೆ.[7]

ಪ್ರಥಮ ಜಾಗತಿಕ ಯುದ್ಧ ಸಮಯದಲ್ಲಿ ವಿಶ್ವದ ಬಹುತೇಕ ಕಾರ್ಮಿಕರು ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಇದನ್ನ ಮನಗಂಡ ಕೆಲವು ರಾಷ್ಟ್ರ ನಾಯಕರು ಅವರ ಸಮಸ್ಯೆಗಳನ್ನು ಪರಿಹರಿಸಲು ಗಮನಿಸಿದರು ವಿಶ್ವದ ರಾಷ್ಟ್ರಗಳು ಆರ್ಥಿಕ ಅಭಿವೃದ್ಧಿ ಸಾಧಿಸಬೇಕಾದರೆ ಕಾರ್ಮಿಕರ ಯೋಗ ಕ್ಷೇಮ ಅಗತ್ಯ ಆದ್ದರಿಂದ ಅವರ ದಕ್ಷತೆಯನ್ನು ಮತ್ತು ಜೀವನಮಟ್ಟವನ್ನು ಉತ್ತಮಪಡಿಸುವ ನಿಟ್ಟಿನಲ್ಲಿ 1919ರಲ್ಲಿ ಅಂತಾರಾಷ್ಟ್ರೀಯ ಕಾರ್ಮಿಕ ಸಂಘಟನೆ ಅಸ್ತಿತ್ವಕ್ಕೆ ಬಂದಿತು. ಈ ಸಂಘದ ಪ್ರಮುಖ ಉದ್ದೇಶವೆಂದರೆ ಕಾರ್ಮಿಕರ ಸಮಸ್ಯೆಗಳನ್ನು ಹೋಗಲಾಡಿಸಿ ಅವರ ಯೋಗಕ್ಷೇಮವನ್ನು ಹೆಚ್ಚಿಸುವುದಾಗಿದೆ.[8] ಅಂತಾರಾಷ್ಟ್ರೀಯ ಕಾರ್ಮಿಕ ಸಂಘಟನೆಯ ರಚನೆ 3 ಹಂತಗಳನ್ನು ಹೊಂದಿದೆ. ಅವುಗಳೆಂದರೆ ಸಾಮಾನ್ಯ ಸಭೆ, ಆಡಳಿತ ಮಂಡಳಿ, ಅಂತಾರಾಷ್ಟ್ರೀಯ ಕಾರ್ಮಿಕ ಕಚೇರಿ ಸಂಬಂಧಿ ಸಭೆಯಲ್ಲಿ ಒಬ್ಬ ಕಾರ್ಮಿಕ ಪ್ರತಿನಿಧಿ ಪ್ರತಿಯೊಂದು ದೇಶದಿಂದ ಪ್ರತಿನಿಧಿಸುತ್ತಾರೆ. ಈ ಸಭೆಯಲ್ಲಿ ಭಾರತದಿಂದ ವಿ.ವಿ ಗಿರಿಯವರು

ಒಂದು ಬಾರಿ ಸಭೆಯಲ್ಲಿ ಭಾಗವಹಿಸಿದ್ದರು. ಇದರಲ್ಲಿ ಕಾರ್ಮಿಕರ ಸಮಸ್ಯೆಗಳ ಬಗ್ಗೆ ಚರ್ಚಿಸಲಾಗುತ್ತದೆ. ಭಾರತದ ಕಾರ್ಮಿಕರ ಕೆಲಸಗಳಿಗೆ ಸಮಸ್ಯೆಗಳಿಗೆ ಸಂಬಂಧ ಪಟ್ಟಂತೆ ಈಗಾಗಲೇ ಸುಮಾರು 32 ಶಿಫಾರಸ್ಸುಗಳ ಒಪ್ಪಂದಗಳಿಗೆ ಅಂತರಾಷ್ಟ್ರೀಯ ಕಾರ್ಮಿಕ ಸಂಘಟನೆಗೆ ಅನುಮೋದನೆ ನೀಡಿದೆ.[9]

ಒಂದು ದೇಶದ ಅಭಿವೃದ್ಧಿ ಸಾಧಿಸಬೇಕಾದರೆ ಅಲ್ಲಿ ಕೈಗಾರಿಕೆಗಳು ಅತ್ಯಂತ ಅವಶ್ಯಕವಾಗಿದೆ ಕೈಗಾರಿಕೆಗಳ ಜೊತೆಗೆ ಕಾರ್ಮಿಕರು ಕೂಡ ಪ್ರಧಾನವಾದ ಪಾತ್ರವಹಿಸುತ್ತಾರೆ. ದೇಶ ಅಭಿವೃದ್ಧಿಯಿಂದ ಹಿಂದುಳಿಯಲು ಕಾರಣ ಕೈಗಾರಿಕೆ ಕುಂಠಿತ ಒಂದಾಗಿರುತ್ತದೆ. ಕೈಗಾರಿಕೆಗಳ ಬಗ್ಗೆ ಅಧ್ಯಯನ ಮಾಡುವುದರ ಜೊತೆಗೆ ಕಾರ್ಮಿಕರ ಸಮಸ್ಯೆಗಳ ಕುರಿತು ಅಧ್ಯಯನ ಮಾಡುವುದು ಅವಶ್ಯಕವಾಗಿದೆ. ಹೈದರಾಬಾದ್ ಕರ್ನಾಟಕ ಪ್ರದೇಶ ಪ್ರಸ್ತುತ ಕೈಗಾರಿಕೆಗಳಲ್ಲಿ ಕಾರ್ಮಿಕರ ಹಿತಾಸಕ್ತಿಯನ್ನು ಕಡೆಗಣಿಸುವುದು ವಿಪರ್ಯಾಸ ಸಂಗತಿಯಾಗಿದೆ. ಅದರಲ್ಲೂ ಸಿಮೆಂಟ್ ಕೈಗಾರಿಕೆಗಳಲ್ಲಿ ಕಾರ್ಮಿಕರ ಸಮಸ್ಯೆಗಳು ಕಂಡುಬರುವುದಾಗಿದೆ. ಮೂಲಭೂತ ಸಮಸ್ಯೆಗಳಲ್ಲಿ ಶುದ್ಧವಾದ ಗಾಳಿ ಬೆಳಕಿನ ಸಮಸ್ಯೆ ಅನಾರೋಗ್ಯದ ಸಮಸ್ಯೆಗಳು, ವಲಸೆ ಮತ್ತು ಉದ್ಯೋಗದ ಅವಶ್ಯಕತೆ ಕೊಳಗೇರಿ ಪ್ರದೇಶದಲ್ಲಿ ವಾಸಸ್ಥಾನ, ಲೈಂಗಿಕ ಕಿರುಕುಳ, ಅಧಿಕ ಸಮಯದ ದುಡಿಮೆ, ಕೈಗಾರಿಕೆ ಸುರಕ್ಷತಾ ಕ್ರಮ ಇಲ್ಲದಿರುವುದು, ಭದ್ರತೆ ರಹಿತ ದುಡಿಮೆ, ಶುದ್ಧ ಕುಡಿಯುವ ನೀರಿನ ಅಭಾವ, ವಿಮಾ ಸೌಲಭ್ಯಗಳು ಇಲ್ಲದಿರುವಿಕೆ, ಕೆಲಸದಿಂದ ಏಕಾಏಕಿ ವಜಾಗೊಳಿಸುವುದು ಮತ್ತು ಕಾರ್ಮಿಕರಿಗೆ ಮಾನಸಿಕ ಕಿರುಕುಳ ನೀಡುವುದು ಹೀಗೆ ಕಾರ್ಮಿಕರ ಪ್ರಮುಖ ಸಮಸ್ಯೆಗಳಾಗಿರುತ್ತವೆ.

ಪ್ರಥಮ ಜಾಗತಿಕ ಯುದ್ಧದವರೆಗೆ ಕಾರ್ಮಿಕರ ಬಗ್ಗೆ ಯಾವ ಜಾಗೃತಿ ಮತ್ತು ಪಾಲನೆ ವಿಚಾರಗಳು ಮುನ್ನೆಲೆಯಲ್ಲಿದ್ದಿಲ್ಲ. ಆದರೆ ಲೋಕಂಡೆ ಮತ್ತು ಎಸ್.ಎಸ್. ಬೆಂಗಾಲಿಯವರು ಭಾರತದಲ್ಲಿ ಪ್ರಥಮ ಮುಂಬೈ ಕಾರ್ಖಾನೆ ಕಮಿಷನ್ (Factory Commission) ಪ್ರಾರಂಭವಾಯಿತು. ಇದರ ಜೊತೆ ಜೊತೆಗೆ 1881ರ ಕಾರ್ಖಾನೆ ಕಾಯ್ದೆ, 1884ರ ದ್ವಿತೀಯ ಮುಂಬೈ ಕಾರ್ಖಾನೆ ಕಮಿಷನ್ 1884ರಲ್ಲಿ ಮುಂಬೈನಲ್ಲಿ ಸಂಘಟಿಸಲ್ಪಟ್ಟಿತು. ಕಾರ್ಮಿಕರ ಸಭೆ ಹಾಗೂ 189ರಲ್ಲಿ 17000 ಕಾರ್ಮಿಕರು ಸಹಿ ಮಾಡಿ ಸರ್ಕಾರ ಸಲ್ಲಿಸಿದ ವಿಜ್ಞಾಪನ ಪತ್ರ ಇವೆಲ್ಲವೂ ಶೈಶದಲ್ಲಿದ್ದ ಕಾರ್ಮಿಕರ ಚಳುವಳಿಯಲ್ಲಿ ಹೆಚ್ಚಿನ ಚೈತನ್ಯದಾಯಕವಾಗಿ ನಡೆದು 1890 ರಲ್ಲಿ ಲೋಕಂಡೆಯವರು ಸ್ಥಾಪಿಸಿದ ಮುಂಬೈ ಗಿರಣಿ ಕಾರ್ಮಿಕರ ಸಂಘವೇ ಭಾರತದ ಪ್ರಥಮ ಕಾರ್ಮಿಕ ಸಂಘಟನೆಯಾಗಿದೆ. ಈ ಎಲ್ಲಾ ಸಂಗತಿಗಳು ಕರ್ನಾಟಕ ಅಲ್ಲದೆ ಉತ್ತರ ಕರ್ನಾಟಕ ಅದರಲ್ಲೂ ಹೈದರಬಾದ್ ಕರ್ನಾಟಕ ಪ್ರದೇಶ ಭಾಗದ ಸಿಮೆಂಟ್ ಕಾರ್ಮಿಕರ ಸ್ಥಿತಿಯು ಭಿನ್ನವೇನು ಆಗಿಲ್ಲ ಎನ್ನಬಹುದು.

**ಸಮಾರೋಪ**

ಒಟ್ಟಾರೆಯಾಗಿ ಕರ್ನಾಟಕ ಕರ್ಮಿಕರ ಅದರಲ್ಲೂ ಹೈದರಬಾದ್ ಕರ್ನಾಟಕ ಪ್ರದೇಶ ಭಾಗಗಳಾದ ಬೀದರ್, ಗುಲ್ಬರ್ಗ, ರಾಯಚೂರು ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳು ಹೆಚ್ಚು ಕೈಗಾರಿಕ ಅನುಕೂಲ ಪ್ರದೇಶಗಳಲ್ಲದಿದ್ದರೂ ವಸಾಹತು ಕಾಲೀನ ಸಂದರ್ಭಕ್ಕೆ ಅಯಾ ಜಿಲ್ಲೆಯ ನೈಸರ್ಗಿಕ ಸಂಪನ್ಮೂಲಗಳಿಗೆ ಅನುಗುಣವಾಗಿ ಕೈಗಾರಿಕೆಗಳು ಮೂಡಿ ಬಂದು ಕಾರ್ಮಿಕರ ಹುಟ್ಟಿಗೆ ಕಾರಣವಾಯಿತು. ವಿಶೇಷವಾಗಿ

ಸಿಮೆಂಟ್ ಕಾರ್ಮಿಕರ ಉದಯಕ್ಕೆ ಆಗು ಮಾಡಿದಲ್ಲದೇ ಅವರು ನಡೆದು ಬಂದ ಜೀವನ ವಿಚಾರಗಳು ಈ ಪ್ರದೇಶವನ್ನು ಗುರುತಿಸುವಂತೆ ಮಾಡಿತು ಹಾಗೆ ಜಾಗತಿಕವಾಗಿ ಮತ್ತು ಮತ್ತು ಪ್ರಾದೇಶಿಕವಾಗಿ ಪಡೆಯಬೇಕಿದ್ದ ಸ್ಥಾನಮಾನ ಪಡೆಯದೇ ಇಂದಿಗೂ ಸೌಲಭ್ಯ ವಂಚಿತರಾಗಿದ್ದು ಹಿಂದುಳಿದಿರುವುದು ಕಂಡುಬರುತ್ತದೆ. ಕಾರ್ಮಿಕರ ಬಗ್ಗೆ ಸರ್ಕಾರ, ಸಂಬಂಧ ಪಟ್ಟ ಇಲಾಖೆಗಳ ನಿರ್ಲಕ್ಷ್ಯ ಧೋರಣೆಗಳು ಅವರ ಸ್ಥಿತಿಗೆ ಹಿಡಿದ ಕೈಗನ್ನಡಿ ಎಂದರೆ ತಪ್ಪಾಗಲಾರದು.

**ಕೊನೆ ಟಿಪ್ಪಣಿ**


1. ತಿಪ್ಪೇಸ್ವಾಮಿ, *ಎಣ್ಣೆ ಗಿರಣಿಯ ಕಾರ್ಮಿಕರ ಸಮಸ್ಯೆಗಳು ಒಂದು ಸಾಮಾಜಿಕ ಶಾಸ್ತ್ರೀಯ ಅಧ್ಯಯನ.* (ಪಿಎಚ್.ಡಿ, ಮಹಾಪ್ರಬಂಧ).
2. ವಿಶ್ವನಾಥ್. (2022). *ಸಿಮೆಂಟ್ ಕೈಗಾರಿಕೆ ಕಾರ್ಮಿಕರ ಸಮಸ್ಯೆ ಮತ್ತು ಸವಾಲುಗಳು.* (ಪಿಎಚ್.ಡಿ ಮಹಾ ಪ್ರಬಂಧ) ಕನ್ನಡ ವಿಶ್ವವಿದ್ಯಾಲಯ. ಪುಟ.93
3. ಅಬ್ದುಲ್ ಅಜೀಜ್. (2010). *ಕಾರ್ಮಿಕ ಚಳುವಳಿ ಕೆಲವು ಟಿಪ್ಪಣಿಗಳು* ಸಮಕಾಲಿನ ಕರ್ನಾಟಕ ಚರಿತ್ರೆ. (ಅನು, ಬಾಗೆಶ್ರೀ ಎಸ್). ಸಂಪುಟ–6. ಪುಟ. 382
4. ಅನಂತ ರಾಮಯ್ಯ, *ಆರ್.ಎಲ್. ಕಾರ್ಮಿಕ ಚಳುವಳಿಯ ಚಾರಿತ್ರಿಕ ಅವಲೋಕನ.* ಪು.357
5. ಪರ್ವಿನ್ ಸುಲ್ತಾನ್. *ರಾಜನೀತಿ ಸಮಾಜ ಮತ್ತು ಆರ್ಥಿಕತೆ ಹೈದರಾಬಾದ್ ಕರ್ನಾಟಕ.* ಪುಟ. 233–234
6. ಉಷಾ ರಮೇಶ್ ನಾಯಕ್. (2010). *ಕಾರ್ಮಿಕರ ಚಳುವಳಿ ಇತ್ತೀಚಿನ ಆಯಾಮಗಳು.* ಸಮಕಾಲೀನ ಕರ್ನಾಟಕ ಚರಿತ್ರೆಯ ವಿವಿದಾಯಾಮಗಳು, ಚರಿತ್ರೆ ಸಂಪುಟ.6. ಪು.398–399
7. ಅದೇ, ಪುಟ.399
8. ಶಿವಚಿತ್ತಪ್ಪ, ಕೆ. (2008). *ಕೈಗಾರಿಕಾ ಸಂಬಂಧಗಳು.* ಅಖಿಲ ಏಜೆನ್ಸಿ ಅಂಜನಾದ್ರಿ, ಪುಟ.29
9. ವಿಶ್ವನಾಥ್. (2022). *ಪೂರ್ವೋಕ್ತ.* ಪು.97